ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ
ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು -560001.

ಸಂಖ್ಯೆ/ಆರ್.ಎಮ್.ಎಸ್.ಎ./ಆ.ವಿ/2018-19ನೇ ಸಾಲಿನ ದಾಖಲಾತಿ/2018-19 ದಿನಾಂಕ: 12/07/2018

## ಜ್ಞಾಪನ

ವಿಷಯ : 2018-19ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳ 6ನೇ ತರಗತಿಗೆ ಮಕ್ಕಳ ದಾಖಲಾತಿಯನ್ನು ಮುಂದುವರೆಸುವ ಬಗ್ಗೆ.

ಉಲ್ಲೇಖ : (1) ಕಛೇರಿಯ ಜ್ಞಾಪನ ಪತ್ರ ಸಂಖ್ಯೆ/ಆರ್.ಎಮ್.ಎಸ್.ಎ./ಆ.ವಿ/2018-19ನೇ ಸಾಲಿನ ದಾಖಲಾತಿ/2018-19 ದಿನಾಂಕ 09/05/2018
(2) ಈ ಕಛೇರಿಯ ಜ್ಞಾಪನ ಸಂಖ್ಯೆ/ಆರ್.ಎಮ್.ಎಸ್.ಎ./ಆ.ವಿ/2018-19ನೇ ಸಾಲಿನ ದಾಖಲಾತಿ/2018-19 ದಿನಾಂಕ: 30/05/2018.

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರನ್ವಯ ಆದರ್ಶ ವಿದ್ಯಾಲಯಗಳಲ್ಲಿ 6ನೇ ತರಗತಿಗೆ ಮಕ್ಕಳನ್ನು ಐದು ಹಂತಗಳಲ್ಲಿ ಆಯ್ಕೆ ಮಾಡಿ ದಾಖಲಾತಿ ಮಾಡಿಕೊಳ್ಳಲು ನಿಗಧಿಪಡಿಸಲಾಗಿತ್ತು. ಮೂರು ಹಂತಗಳಲ್ಲಿ ನಡೆದ ದಾಖಲಾತಿಯ ಪ್ರಕ್ರಿಯೆಯಲ್ಲಿ ನಿಗಧಿಪಡಿಸಿದ ಸಂಖ್ಯೆಯಲ್ಲಿ ಮಕ್ಕಳು ದಾಖಲಾಗದಿದ್ದರಿಂದ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಸ್ವ-ಸಾಮರ್ಥ್ಯದಿಂದ ಆಯ್ಕೆಯಾದ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಆಯ್ಕೆ ಪಟ್ಟಿಯನ್ನು ಅನುಸರಿಸಿ ದಾಖಲಾತಿಯನ್ನು ಮಾಡಿಕೊಳ್ಳಲು ಪ್ರಥಮವಾಗಿ ನಿಗಧಿಪಡಿಸಿದ ಸಮಯವನ್ನು ವಿಸ್ತರಿಸುತ್ತಾ ಅರ್ಹ ಮಕ್ಕಳಿಗೆ ದಾಖಲಾಗಲು ಹೆಚ್ಚಿನ ಕಾಲಾವಕಾಶವನ್ನು ಕಲ್ಪಿಸಲಾಗಿತ್ತು. ಪ್ರಸ್ತುತ ನಾಲ್ಕನೆಯ ಹಂತದ ಆಯ್ಕೆಪಟ್ಟಿಯನ್ವಯ ಆಸಕ್ತ ಅರ್ಹ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳುವ ಪ್ರಕ್ರಿಯೆಗೆ ದಿನಾಂಕ 16/07/2018 ರಂದು ಸಂಜೆ 5.00 ಗಂಟೆಯವರೆಗೂ ಅವಕಾಶವನ್ನು ಕಲ್ಪಿಸಲಾಗಿದ್ದು, ಈ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ.

ಪ್ರಸ್ತುತ ನಾಲ್ಕು ಹಂತಗಳಲ್ಲಿ ನಡೆಸಲಾಗಿರುವ ದಾಖಲಾತಿ ಪ್ರಕ್ರಿಯೆಯ ಸಂಖ್ಯಿಕ ಮಾಹಿತಿ ಈ ಕೆಳಕಂಡಂತಿದೆ.

| ದಾಖಲಾತಿಯ ಹಂತ | ದಾಖಲಾತಿಗಾಗಿ ಅವಕಾಶ ಮಾಡಲಾಗಿದ್ದ ಸ್ಥಾನಗಳ ಸಂಖ್ಯೆ | ನಿಗಧಿಪಡಿಸಿದ ದಿನಾಂಕದಲ್ಲಿ ದಾಖಲಾದ ಮಕ್ಕಳ ಸಂಖ್ಯೆ | ಆದರ್ಶ ವಿದ್ಯಾಲಯಗಳಿಂದ ವರ್ಗಾವಣೆ ಪಡೆದಿರುವ ಮಕ್ಕಳ ಸಂಖ್ಯೆ | ಮುಂದಿನ ಹಂತದ ದಾಖಲಾತಿಗೆ ನಿಗಧಿಪಡಿಸಲಾದ ಸ್ಥಾನಗಳ ಸಂಖ್ಯೆ |
|---|---|---|---|---|
| ಒಂದು | 5920 | 3368 | 0 | 2552 |
| ಎರಡು | 2552 | 1185 | 0 | 1367 |
| ಮೂರು | 1367 | 541 | 0 | 826 |
| ನಾಲ್ಕು | 817 | 239 | 78 | 656 |

ಆದರ್ಶ ವಿದ್ಯಾಲಯಗಳಲ್ಲಿ ಪೂರ್ಣಪ್ರಮಾಣದಲ್ಲಿ ನಿಗಧಿಪಡಿಸಿರುವ ಎಲ್ಲಾ 80 ಮಕ್ಕಳು ದಾಖಲಾಗದಿರುವುದು ಕಂಡುಬಂದಿರುತ್ತದೆ. ಭರ್ತಿಯಾಗಿರುವ ಮತ್ತು ಖಾಲಿಯಿರುವ ಸ್ಥಾನಗಳ ಸಂಖ್ಯೆಯ ವಿವರಗಳನ್ನು ದಿನಾಂಕ 16/07/2018 ರಂದು ಪ್ರಕಟಿಸಲಾಗಿದೆ. ಈಗಾಗಲೇ ನಾಲ್ಕು ಹಂತಗಳಲ್ಲಿ ದಾಖಲಾತಿಗಾಗಿ ಅವಕಾಶವನ್ನು ನೀಡಲಾಗಿರುವ ಮಕ್ಕಳನ್ನು ಹೊರತುಪಡಿಸಿ, ಆದರ್ಶ ವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಲು ಪ್ರವೇಶ ಪರೀಕ್ಷೆಯನ್ನು ಬರೆದು ಅರ್ಹತೆಯನ್ನು ಪಡೆದಿರುವ ಮಕ್ಕಳಿಗೆ ದಾಖಲಾತಿ ಮಾಡಿಕೊಳ್ಳಲು ಐದನೆಯ ಹಂತದ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ ದಾಖಲಾತಿ ಪ್ರಕ್ರಿಯೆಯನ್ನು ಕೆಳಕಂಡ ಸೂಚನೆಗಳನ್ವಯ ಕೈಗೊಳ್ಳುವಂತೆ ಸೂಚಿಸಲಾಗಿದೆ.

1. ನಾಲ್ಕು ಪಟ್ಟಿಗಳನ್ನು ಅನುಸರಿಸಿ ಮೀಸಲಾತಿವಾರು 6ನೇ ತರಗತಿಗೆ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳಲಾಗಿದೆ. ದಾಖಲಾಗದೇ ಉಳಿದ ಕೆಲವು ಸ್ಥಾನಗಳನ್ನು ಹಾಗೂ ದಾಖಲಾತಿಯಾಗಿ ಶಾಲೆಯನ್ನು ಬಿಟ್ಟಿರುವ 78 ಮಕ್ಕಳ ಸ್ಥಾನಗಳನ್ನು ಭರ್ತಿ ಮಾಡಲು ಆಯಾ ಮೀಸಲಾತಿಗೆ ಅನುಗುಣವಾದ ಪಟ್ಟಿಯನ್ನು ಸಿದ್ಧಪಡಿಸಿ ವಿದ್ಯಾವಾಹಿನಿಯಲ್ಲಿ ಆಯಾ ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ಅರ್ಹ ಮಕ್ಕಳ ವಿವರಗಳನ್ನು ನೀಡಲಾಗಿದೆ.
2. ಶಾಲಾವಾರು ಹಾಗೂ ಮೀಸಲಾತಿವಾರು ಲಭ್ಯವಿರುವ ಖಾಲಿ ಸ್ಥಾನಗಳ ಪಟ್ಟಿಯನ್ನು ವಿದ್ಯಾವಾಹಿನಿಯ ತಂತ್ರಾಂಶದಲ್ಲಿ ದಿನಾಂಕ 17/07/2018 ರಂದು ಅಳವಡಿಸಲಾಗುವುದು. ಅದರ ನಾಲ್ಕು ಪ್ರತಿಗಳನ್ನು ಯಾವುದೇ ಮಾಹಿತಿಯನ್ನು ಮುಚ್ಚದಂತೆ (hide) ಎ3(A3) ಅಳತೆಯ ಹಾಳೆಯಲ್ಲಿಯೇ (11.7 x 16.5 inches) ಮುದ್ರಿಸಿ, ಒಂದು ಪ್ರತಿಯನ್ನು ಶಾಲೆಯಲ್ಲಿ ಅಗತ್ಯ ಕ್ರಮಕ್ಕಾಗಿ ನಿರ್ವಹಿಸುವುದು. ಉಳಿದ ಮೂರು ಪ್ರತಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ತಾಲ್ಲೂಕು ಕಛೇರಿ ಮತ್ತು ಆದರ್ಶ ವಿದ್ಯಾಲಯಗಳ ಸೂಚನಾ ಫಲಕದಲ್ಲಿ ಸಾರ್ವಜನಿಕರ ವೀಕ್ಷಣೆಗೆ ಅಗತ್ಯವಿರುವ ರೀತಿಯಲ್ಲಿ ಅಳವಡಿಸುವುದು.

3. ಈ ಐದನೆಯ ಸುತ್ತಿನಲ್ಲಿ ಅರ್ಹತೆಯನ್ನು ಪಡೆದ ಮಕ್ಕಳ ಪೋಷಕರ ದೂರವಾಣಿಗೆ ದಾಖಲಾತಿ ಪ್ರಕ್ರಿಯೆ ಆರಂಭವಾಗುವ ದಿನಾಂಕ, ಸಮಯ ಹಾಗೂ ಮುಕ್ತಾಯವಾಗುವ ದಿನಾಂಕ ಮತ್ತು ಸಮಯಗಳ ವಿವರದ ಸಂದೇಶವನ್ನು ಕಳುಹಿಸಲಾಗುವುದು.
4. ಈ ಪಟ್ಟಿಯನ್ನು ಅನುಸರಿಸಿ ದಿನಾಂಕ 19/07/2018 ರಂದು ಐದನೆಯ ಹಂತದ ದಾಖಲಾತಿಯನ್ನು ಕ್ರಮ ಸಂಖ್ಯೆ-6ರಲ್ಲಿ ನೀಡಿರುವ ವೇಳಾಪಟ್ಟಿಯನ್ನು ಅನುಸರಿಸಿ ಮಾಡಿಕೊಳ್ಳುವುದು.
5. ಐದನೆಯ ಹಂತದ ದಾಖಲಾತಿಯನ್ನು ಮಾಡಿಕೊಳ್ಳಲು ಮೀಸಲಾತಿ ಖಾಲಿ ಇರುವ ಶಾಲಾವಾರು ಪಟ್ಟಿಯನ್ನು ಕೋಷ್ಟಕ-1ರಲ್ಲಿ ನೀಡಲಾಗಿದೆ.

ಕೋಷ್ಟಕ-1 : ಆದರ್ಶ ವಿದ್ಯಾಲಯಗಳ 6ನೇ ತರಗತಿಯ ದಾಖಲಾತಿಗೆ ಸಂಬಂಧಿಸಿದಂತೆ ನಾಲ್ಕು ಹಂತಗಳಲ್ಲಿ ನಡೆದ ದಾಖಲಾತಿ ಪ್ರಕ್ರಿಯೆಯ ನಂತರ ಉಳಿಕೆಯಾದ ಸ್ಥಾನಗಳ ವಿವರ

| ಜಿಲ್ಲೆ | ತಾಲ್ಲೂಕು | ಶಾಲೆಯ ಡೈಸ್ ಸಂಕೇತ | ಸಾಮಾನ್ಯ ವರ್ಗ | ಎಸ್. ಸಿ | ಎಸ್. ಟಿ | ಪ್ರವರ್ಗ-1 | 2ಎ | 2ಬಿ | 3 ಎ | 3 ಬಿ | ಒಟ್ಟು |
|---|---|---|---|---|---|---|---|---|---|---|---|
| ಬಾಗಲಕೋಟೆ | ಬದಾಮಿ | 29020115206 | 2 | 3 | 1 | 0 | 1 | 0 | 0 | 0 | 7 |
| | ಬಾಗಲಕೋಟ | 29020212512 | 3 | 3 | 2 | 0 | 2 | 0 | 0 | 0 | 10 |
| | ಬೀಳಗಿ | 29020608012 | 3 | 2 | 0 | 0 | 0 | 1 | 0 | 0 | 6 |
| | ಹನಗುಂದ | 29020720205 | 1 | 3 | 1 | 0 | 0 | 1 | 0 | 0 | 6 |
| | ಜಮಖಂಡಿ | 29020910003 | 1 | 4 | 2 | 2 | 0 | 0 | 1 | 0 | 10 |
| | ಮುಧೋಳ | 29021111002 | 12 | 4 | 1 | 1 | 3 | 2 | 1 | 0 | 24 |
| ಬಳ್ಳಾರಿ | ಬಳ್ಳಾರಿ ಪಶ್ಚಿಮ | 29120115107 | 7 | 0 | 0 | 0 | 5 | 0 | 0 | 0 | 12 |
| | ಹಗರಿಬೊಮ್ಮನಹಳ್ಳಿ | 29120301440 | 3 | 2 | 1 | 1 | 0 | 0 | 0 | 0 | 7 |
| | ಹೊಸಪೇಟೆ | 29120509207 | 1 | 1 | 1 | 0 | 3 | 0 | 0 | 0 | 6 |
| | ಕೂಡ್ಲಿಗಿ | 29120608802 | 12 | 6 | 0 | 1 | 2 | 1 | 1 | 1 | 24 |
| | ಸಂಡೂರು | 29120701007 | 2 | 1 | 1 | 0 | 0 | 0 | 1 | 0 | 5 |
| | ಸಿರುಗುಪ್ಪ | 29120802106 | 6 | 1 | 1 | 0 | 1 | 0 | 0 | 0 | 9 |
| ಬೆಳಗಾವಿ | ರಾಮದುರ್ಗ | 29011110629 | 3 | 8 | 2 | 0 | 1 | 1 | 2 | 1 | 18 |
| | ಸವದತ್ತಿ | 29011208102 | 12 | 5 | 1 | 0 | 6 | 1 | 3 | 0 | 28 |
| ಚಿಕ್ಕೋಡಿ | ಗೋಕಾಕ್ | 29300603482 | 21 | 7 | 2 | 3 | 8 | 2 | 3 | 1 | 47 |
| | ರಾಯಬಾಗ | 29301004008 | 5 | 7 | 0 | 0 | 0 | 0 | 0 | 0 | 12 |
| ಬೀದರ | ಔರಾದ | 29050100158 | 0 | 1 | 1 | 0 | 0 | 0 | 0 | 0 | 2 |
| | ಬಸವಕಲ್ಯಾಣ | 29050213410 | 2 | 1 | 2 | 0 | 0 | 0 | 1 | 0 | 6 |
| | ಬೀದರ | 29050405717 | 8 | 4 | 1 | 0 | 1 | 0 | 0 | 0 | 14 |
| | ಹುಮನಾಬಾದ | 29050500911 | 6 | 3 | 1 | 0 | 0 | 0 | 1 | 1 | 12 |
| ಚಾಮರಾಜನಗರ | ಚಾಮರಾಜನಗರ | 29270126505 | 0 | 0 | 0 | 0 | 0 | 0 | 0 | 0 | 0 |
| | ಗುಂಡ್ಲುಪೇಟೆ | 29270219002 | 0 | 3 | 1 | 0 | 0 | 0 | 0 | 0 | 4 |
| | ಕೊಳ್ಳೇಗಾಲ | 29270520501 | 0 | 0 | 0 | 0 | 0 | 0 | 0 | 0 | 0 |
| | ಯಳಂದೂರು | 29271204302 | 0 | 2 | 0 | 0 | 0 | 0 | 0 | 0 | 2 |
| ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 29290121940 | 0 | 0 | 0 | 0 | 0 | 0 | 0 | 0 | 0 |
| | ಚಿಂತಾಮಣಿ | 29290442711 | 2 | 0 | 0 | 0 | 0 | 0 | 0 | 0 | 2 |
| | ಗೌರಿಬಿದನೂರು | 29290523811 | 2 | 0 | 0 | 0 | 0 | 0 | 0 | 0 | 2 |
| | ಗುಡಿಬಂಡೆ | 29290611706 | 12 | 0 | 0 | 0 | 0 | 0 | 0 | 0 | 12 |
| ಜಿಲ್ಲೆ | ತಾಲ್ಲೂಕು | ಶಾಲೆಯ ಡೈಸ್ ಸಂಕೇತ | ಸಾಮಾನ್ಯ ವರ್ಗ | ಎಸ್. ಸಿ | ಎಸ್. ಟಿ | ಪ್ರವರ್ಗ-1 | 2ಎ | 2ಬಿ | 3 ಎ | 3 ಬಿ | ಒಟ್ಟು |

| | | | | | | | | | | | |
|---|---|---|---|---|---|---|---|---|---|---|---|
| ಚಿತ್ರದುರ್ಗ | ಚಳ್ಳಕೆರೆ | 29130220507 | 4 | 1 | 1 | 0 | 1 | 0 | 0 | 1 | 8 |
| | ಮೊಳಕಾಲ್ಮೂರು | 29130612408 | 1 | 0 | 0 | 0 | 0 | 0 | 0 | 0 | 1 |
| ದಾವಣಗೆರೆ | ಹರಪನಹಳ್ಳಿ | 29140709701 | 5 | 9 | 0 | 0 | 4 | 1 | 0 | 0 | 19 |
| ಧಾರವಾಡ | ಧಾರವಾಡ | 29090112716 | 0 | 5 | 0 | 0 | 0 | 0 | 0 | 0 | 5 |
| | ಕಲಘಟಗಿ | 29090308828 | 0 | 3 | 1 | 0 | 0 | 0 | 0 | 0 | 4 |
| ಗದಗ | ಮುಂಡರಗಿ | 29080205542 | 0 | 6 | 0 | 1 | 1 | 0 | 0 | 0 | 8 |
| | ರೋಣ | 29080409933 | 3 | 6 | 2 | 1 | 2 | 1 | 0 | 0 | 15 |
| ಹಾಸನ | ಹೊಳೆನರಸೀಪುರ | 29230612146 | 0 | 0 | 0 | 0 | 0 | 0 | 0 | 0 | 0 |
| ಕಲಬುರಗಿ | ಅಫಜಲಪುರ | 29040211803 | 9 | 4 | 0 | 0 | 0 | 1 | 3 | 0 | 17 |
| | ಆಳಂದ | 29040116202 | 3 | 0 | 0 | 0 | 0 | 0 | 0 | 0 | 3 |
| | ಚಿಂಚೋಳಿ | 29040302236 | 5 | 1 | 0 | 0 | 2 | 0 | 0 | 0 | 8 |
| | ಚಿತ್ತಾಪೂರ | 29040402450 | 3 | 0 | 0 | 0 | 0 | 0 | 0 | 0 | 3 |
| | ಕಲಬುರಗಿ (ದ) | 29041108526 | 4 | 0 | 0 | 0 | 1 | 0 | 0 | 0 | 5 |
| | ಜೇವರ್ಗಿ | 29040619304 | 8 | 6 | 1 | 1 | 3 | 0 | 1 | 0 | 20 |
| | ಸೇಡಂ | 29040901302 | 1 | 1 | 2 | 0 | 0 | 0 | 0 | 0 | 4 |
| ಕೋಲಾರ | ಬಂಗಾರಪೇಟೆ | 29190243406 | 1 | 0 | 1 | 0 | 0 | 0 | 0 | 0 | 2 |
| | ಮುಳಬಾಗಿಲು | 29191048103 | 3 | 2 | 0 | 1 | 2 | 0 | 0 | 0 | 8 |
| | ಶ್ರೀನಿವಾಸಪುರ | 29191233542 | 6 | 3 | 0 | 0 | 0 | 0 | 1 | 0 | 10 |
| ಕೊಪ್ಪಳ | ಗಂಗಾವತಿ | 29070208421 | 0 | 0 | 0 | 0 | 0 | 0 | 0 | 0 | 0 |
| | ಕೊಪ್ಪಳ | 29070311360 | 8 | 6 | 1 | 0 | 1 | 0 | 1 | 1 | 18 |
| | ಕುಷ್ಟಗಿ | 29070409622 | 10 | 8 | 1 | 1 | 2 | 1 | 1 | 0 | 24 |
| | ಯಲಬುರ್ಗಾ | 29070906107 | 6 | 6 | 1 | 1 | 2 | 2 | 0 | 1 | 19 |
| ಮಂಡ್ಯ | ಮಳವಳ್ಳಿ | 29220313806 | 1 | 0 | 0 | 0 | 1 | 0 | 0 | 0 | 2 |
| | ಪಾಂಡವಪುರ | 29220618411 | 2 | 3 | 0 | 0 | 0 | 0 | 0 | 0 | 5 |
| ಮೈಸೂರು | ಹೆಗ್ಗಡದೇವನಕೋಟೆ | 29260300805 | 3 | 0 | 0 | 0 | 0 | 0 | 0 | 1 | 4 |
| | ಹುಣಸೂರು | 29260427501 | 2 | 0 | 0 | 0 | 0 | 0 | 0 | 0 | 2 |
| | ಕೆ.ಆರ್.ನಗರ | 29260623013 | 3 | 3 | 0 | 0 | 0 | 0 | 0 | 1 | 7 |
| | ಮೈಸೂರು | 29261201327 | 0 | 0 | 0 | 1 | 0 | 0 | 0 | 0 | 1 |
| | ನಂಜನಗೂಡು | 29260906002 | 0 | 0 | 0 | 0 | 0 | 0 | 0 | 0 | 0 |
| | ಟಿ.ನರಸಿಪುರ | 29261115807 | 0 | 0 | 0 | 0 | 0 | 0 | 0 | 0 | 0 |
| ರಾಯಚೂರು | ದೇವದುರ್ಗ | 29060101215 | 14 | 3 | 3 | 1 | 0 | 1 | 0 | 1 | 23 |
| | ಲಿಂಗಸಗೂರು | 29060523106 | 0 | 4 | 2 | 0 | 0 | 0 | 1 | 0 | 7 |
| | ಮಾನವಿ | 29060618417 | 7 | 3 | 1 | 0 | 2 | 0 | 0 | 0 | 13 |
| | ರಾಯಚೂರು | 29060716609 | 0 | 0 | 0 | 0 | 0 | 0 | 0 | 1 | 1 |
| | ಸಿಂಧನೂರ | 29060818108 | 3 | 3 | 2 | 1 | 0 | 0 | 0 | 1 | 10 |

| ಜಿಲ್ಲೆ | ತಾಲ್ಲೂಕು | ಶಾಲೆಯ ಡೈಸ್ ಸಂಕೇತ | ಸಾಮಾನ್ಯ ವರ್ಗ | ಎಸ್. ಸಿ | ಎಸ್. ಟಿ | ಪ್ರವರ್ಗ-1 | 2ಎ | 2ಬಿ | 3 ಎ | 3 ಬಿ | ಒಟ್ಟು |
|---|---|---|---|---|---|---|---|---|---|---|---|
| ರಾಮನಗರ | ಚನ್ನಪಟ್ಟಣ | 29320703102 | 1 | 2 | 0 | 0 | 0 | 0 | 0 | 0 | 3 |
| | ಕನಕಪುರ | 29320819310 | 1 | 0 | 0 | 0 | 0 | 0 | 0 | 0 | 1 |
| ಮಧುಗಿರಿ | ಪಾವಗಡ | 29310513511 | 1 | 2 | 0 | 0 | 0 | 0 | 0 | 0 | 3 |
| ವಿಜಯಪುರ | ಬಸವನ ಬಾಗೇವಾಡಿ | 29030304807 | 0 | 4 | 1 | 0 | 1 | 1 | 0 | 0 | 7 |
| | ಇಂಡಿ | 29030823115 | 3 | 2 | 0 | 1 | 1 | 1 | 0 | 1 | 9 |
| | ಮುದ್ದೇಬಿಹಾಳ | 29031002306 | 2 | 0 | 1 | 0 | 0 | 0 | 0 | 0 | 3 |
| | ಸಿಂಧಗಿ | 29031216602 | 7 | 1 | 1 | 0 | 0 | 0 | 0 | 1 | 10 |
| | ವಿಜಯಪುರ | 29030505404 | 11 | 6 | 0 | 0 | 2 | 0 | 1 | 0 | 20 |
| ಯಾದಗಿರಿ | ಶಹಾಪುರ | 29330718504 | 0 | 1 | 0 | 0 | 0 | 0 | 1 | 0 | 2 |
| | ಸುರಪುರ | 29330820908 | 10 | 9 | 3 | 2 | 2 | 2 | 2 | 0 | 30 |
| | ಯಾದಗಿರಿ | 29331026213 | 3 | 2 | 0 | 0 | 0 | 0 | 0 | 0 | 5 |
| ಒಟ್ಟು | | | 280 | 186 | 47 | 20 | 63 | 20 | 26 | 14 | 656 |

6. <u>ಖಾಲಿ ಇರುವ ಸ್ಥಾನಗಳನ್ನು ದಾಖಲಾತಿಯ ಮೂಲಕ ಭರ್ತಿ ಮಾಡಲು ಅನುಸರಿಸಬೇಕಾದ ವೇಳಾಪಟ್ಟಿ.</u>

| ಮೀಸಲಾತಿಯ ವಿಧ | ದಾಖಲಾತಿಗಾಗಿ ಹಾಜರಾಬೇಕಾದ ಸಮಯ |
|---|---|
| ಸಾಮಾನ್ಯ ವರ್ಗ (General) | ಬೆಳಿಗ್ಗೆ 10.00 ಗಂಟೆಯಿಂದ 11.00 ಗಂಟೆಯವರೆಗೆ |
| ಪರಿಶಿಷ್ಟ ಜಾತಿ-ಎಸ್.ಸಿ (SC) | ಬೆಳಿಗ್ಗೆ 11.00 ಗಂಟೆಯಿಂದ ಮದ್ಯಾಹ್ನ 12.00 ಗಂಟೆಯವರೆಗೆ |
| ಪರಿಶಿಷ್ಟ ವರ್ಗ-ಎಸ್.ಟಿ (ST) | ಮದ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯವರೆಗೆ |
| ಪ್ರವರ್ಗ-1(Category-1) | ಮದ್ಯಾಹ್ನ 1.30 ಗಂಟೆಯಿಂದ 2.30 ಗಂಟೆಯವರೆಗೆ |
| 2ಎ (2A) | ಮದ್ಯಾಹ್ನ 2.30 ಗಂಟೆಯಿಂದ 3.30 ಗಂಟೆಯವರೆಗೆ |
| 2ಬಿ (2B) | ಮದ್ಯಾಹ್ನ 3.30 ಗಂಟೆಯಿಂದ 4.30 ಗಂಟೆಯವರೆಗೆ |
| 3ಎ (3A) | ಸಂಜೆ 4.30 ಗಂಟೆಯಿಂದ 5.30 ಗಂಟೆಯವರೆಗೆ |
| 3ಬಿ (3B) | ಸಂಜೆ 5.30 ಗಂಟೆಯಿಂದ 6.30 ಗಂಟೆಯವರೆಗೆ |

**ವಿಶೇಷ ಸೂಚನೆ:** ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು ಬೇರೆಯವರನ್ನು ನಿಯೋಜಿಸದೇ ದಿನಾಂಕ 19/07/2018 ರಂದು ಖುದ್ದಾಗಿ ಶಾಲೆಯಲ್ಲಿ ಉಪಸ್ಥಿತರಿದ್ದು, ದಾಖಲಾತಿ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡುವಂತೆ ತಿಳಿಸಿದೆ.

7. ಐದನೆಯ ಅರ್ಹತಾ ಪಟ್ಟಿಯಲ್ಲಿ ಆಯಾ ಮೀಸಲಾತಿಗೆ ಸಂಬಂಧಿಸಿದ, ಪರೀಕ್ಷೆಯನ್ನು ಬರೆದು ನಾಲ್ಕು ಆಯ್ಕೆಪಟ್ಟಿಯಲ್ಲಿ ಇಲ್ಲಿಯವರೆಗೂ ಅವಕಾಶ ದೊರೆಯದ ಎಲ್ಲಾ ಮಕ್ಕಳಿಗೆ ದಾಖಲಾತಿ ಪ್ರಕ್ರಿಯೆಗೆ ಶಾಲೆಗೆ ನಿಗಧಿತ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸಂದೇಶವನ್ನು ಅವರ ದೂರವಾಣಿಗೆ ಕಳುಹಿಸಲಾಗಿದೆ. ಅದರನ್ವಯ ಪೋಷಕರು/ಮಕ್ಕಳು ದಾಖಲಾತಿ ಪ್ರಕ್ರಿಯೆಗೆ ಹಾಜರಾಗುತ್ತಾರೆ. ಆದರೇ, ಎಲ್ಲಾ ಮಕ್ಕಳಿಗೂ ದಾಖಲಾತಿಯ ಅವಕಾಶ ದೊರೆಯುವುದಿಲ್ಲ. ಖಾಲಿ ಇರುವ ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ **ದಾಖಲಾತಿಯ ದಿನದಂದು ನಿಗಧಿಪಡಿಸಿದ ಸಮಯಕ್ಕೆ ಹಾಜರಾಗುವ ಮತ್ತು ಅವರಲ್ಲಿ ಅತಿ ಹೆಚ್ಚು ಅಂಕ ಪಡೆದ/ಹುಟ್ಟಿದ ದಿನಾಂಕದ ಹಿರಿತನವಿರುವ ಮಕ್ಕಳಿಗೆ ಮಾತ್ರ ಅವಕಾಶ ದೊರೆಯುತ್ತದೆ.** ಶಾಲೆಯಲ್ಲಿ ಪೂರ್ಣಪ್ರಮಾಣದಲ್ಲಿ ದಾಖಲಾತಿಯಾಗುತ್ತಿರುವುದು ವಿಳಂಬವಾಗುತ್ತಿದ್ದು, ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೀಘ್ರಗತಿಯಲ್ಲಿ ಮಕ್ಕಳನ್ನು ದಾಖಲೆ ಮಾಡಿಕೊಳ್ಳಲು ಈ ಹಂತದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

8. ದಿನಾಂಕ 19/07/2018 ರಂದು ಅಂತಿಮ ಹಂತದ ದಾಖಲಾತಿಯನ್ನು ಮಾಡಿಕೊಂಡ ನಂತರ ವಿದ್ಯಾವಾಹಿನಿಯ ತಂತ್ರಾಂಶವನ್ನು ಸ್ಥಗಿತಗೊಳಿಸಲಾಗುವುದು. ಆದ್ದರಿಂದ ಐದನೆಯ ಪಟ್ಟಿಯನ್ನು ಆಧರಿಸಿ ದಿನಾಂಕ 19/07/2018ರಂದು ಕೈಗೊಂಡಿರುವ ದಾಖಲಾತಿಯ ಪ್ರಕ್ರಿಯೆಯ ಎಲ್ಲಾ ಕಾರ್ಯಗಳನ್ನು ಅಂದೇ ಪೂರ್ಣಗೊಳಿಸುವುದು. ವಿಳಂಬವಾದಲ್ಲಿ ಆಯಾ ಶಾಲೆಯ ಮುಖ್ಯೋಪಾಧ್ಯಾಯರೇ ನೇರ ಜವಾಬ್ದಾರರಾಗಿರುತ್ತಾರೆ.

**ಪೋಷಕರಿಗೆ ಸೂಚನೆ**

- ಐದನೆಯ ಹಂತದ ದಾಖಲಾತಿಯ ಪ್ರಕ್ರಿಯೆಯಲ್ಲಿ ದಾಖಲಾತಿ ಮಾಡಿಕೊಳ್ಳಲು ಅರ್ಹತೆಯನ್ನು ಪಡೆದಿರುವ ಮಕ್ಕಳ ಪೋಷಕರು, ಅಗತ್ಯ ದಾಖಲೆಗಳೊಂದಿಗೆ ನಿಗಧಿಪಡಿಸಿದ ಸಮಯಕ್ಕೆ ಸರಿಯಾಗಿ ಆಯಾ ಆದರ್ಶ ವಿದ್ಯಾಲಯಗಳಿಗೆ ಹಾಜರಾಗುವುದು. ವಿದ್ಯಾರ್ಥಿಗಳು/ಪೋಷಕರ ಸಭೆಯನ್ನು ಆಯೋಜಿಸಿ **ಅತಿ ಹೆಚ್ಚು ಅಂಕ ಪಡೆದ / ಹುಟ್ಟಿದ ದಿನಾಂಕ** – ಈ ಎರಡೂ ಮಾನದಂಡಗಳನ್ನು ಪರಿಗಣಿಸಿ ಖಾಲಿ ಇರುವ ಸ್ಥಾನಗಳ ಸಂಖ್ಯೆಗೆ ಅನುಗುಣವಾಗಿ ಹಿರಿತನವನ್ನು ನಿಗಧಿಪಡಿಸಿ ಆಯಾ ಮೀಸಲಾತಿಯ ವಿದ್ಯಾರ್ಥಿಗಳನ್ನು ಮಾತ್ರ ನಿಯಮಾನುಸಾರವಾಗಿ ದಾಖಲಾತಿ ಮಾಡಿಕೊಳ್ಳಲಾಗುವುದು.
- ನಿಗಧಿಪಡಿಸಿದ ಸಮಯಕ್ಕೆ ಸಂಬಂಧಿಸಿದ ಆದರ್ಶ ವಿದ್ಯಾಲಯಗಳಿಗೆ ಸರಿಯಾಗಿ ಹಾಜರಾಗದೇ ಇರುವವರು ಅಥವಾ ಸೂಕ್ತ ದಾಖಲೆಗಳನ್ನು ದಿನಾಂಕ 19/07/2018 ರಂದು ಸಲ್ಲಿಸದೇ ಇರುವವರನ್ನು ಪರಿಗಣಿಸುವಂತಿಲ್ಲ. ಅದಕ್ಕೆ ಆದರ್ಶ ವಿದ್ಯಾಲಯವು ಜವಾಬ್ದಾರಿಯಾಗುವುದಿಲ್ಲ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಅಭಿಯಾನ
ಬೆಂಗಳೂರು

ಗೆ,

1. **ಆದರ್ಶ ವಿದ್ಯಾಲಯಗಳಿಗೆ ಮಕ್ಕಳನ್ನು ದಾಖಲಾಗುವ ಪೋಷಕರಿಗೆ ಅಗತ್ಯ ಕ್ರಮಕ್ಕಾಗಿ.**
2. ರಾಜ್ಯದ ಎಲ್ಲಾ 74 ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಗೆ ಅಗತ್ಯ ಕ್ರಮಕ್ಕಾಗಿ.
3. ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಮತ್ತು ಡಿ.ವೈ.ಪಿ.ಸಿ (ಆರ್.ಎಂ.ಎಸ್.ಎ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
4. ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
5. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.